(ಈ) ಮೀನುಗಾರಿಕೆ ಮತ್ತು ಬಂದರು ಇಲಾಖೆಯ ಷೆಡ್ಡುಗಳ ಬಾಡಿಗೆ ಏರಿಸಿರುವುದು

★ಶ್ರೀ ಕೆ. ಜಯರಾಮಶೆಟ್ಟಿ (ಉಲ್ಲಾಳ) :- ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಉಲ್ಲಾಳ ಮತ್ತು ಮಂಗಳೂರು ಪ್ರದೇಶದಲ್ಲಿ ಮೀನು ಶೇಖರಣಾ ಮತ್ತು ಮೀನು ಒಣಗಿಸುವ ಜಮೀನುಗಳನ್ನು ಬಹಳಷ್ಟು ವರ್ಷಗಳಿಂದ ಜನ ಉಪಯೋಗ ಮಾಡುತ್ತಿದ್ದಾರೆ. ಅದರಲ್ಲಿ ಸುಮಾರು 300 ಜನ ನೇರವಾಗಿ ವ್ಯಾಪಾರ ಮಾಡುತ್ತಿದ್ದು 3 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳು ಇದರಲ್ಲಿ ಒಳಪಟ್ಟಿದ್ದಾರೆ. ಈ ವರ್ಷ ರಾಜ್ಯದ ಮೀನುಗಾರಿಕೆ ಮತ್ತು ಬಂದರು ಇಲಾಖೆಯವರು ಷೆಡ್ಡುಗಳಿಗೆ ಹೆಚ್ಚು ಬಾಡಿಗೆಯನ್ನು ಹಾಕಿದ್ದಾರೆ. ಕಳೆದ ಸಲ 10 ಸ್ಕ್ವೇಯರ್ ಮೀಟರ್‌ಗೆ 3 ರೂಪಾಯಿ ಬಾಡಿಗೆ ಇದ್ದದ್ದನ್ನು ಈ ಸಲ ಏಕಪಕ್ಷೀಯವಾಗಿ 8 ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಇನ್ನುಳಿದ ಕೆಲವು ಜಾಗಗಳಿಗೆ ಬಾಡಿಗೆಯಾಗಿ 2 ರೂಪಾಯಿ ಇದ್ದದ್ದನ್ನು 6 ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಅಲ್ಲಿ ಸರ್ಕಾರಿ ಜಾಗದಲ್ಲಿ ಮರಳು ತುಂಬಿ ವ್ಯಾಪಾರ ಆಗುತ್ತಾ ಉಂಟು. ಇವರು ಏಕಪಕ್ಷೀಯವಾಗಿ 300 ಜನರಿಂದ ಸುಮಾರು 10 ಲಕ್ಷಕ್ಕೂ ಹೆಚ್ಚು ಬಾಡಿಗೆಯನ್ನು ವಸೂಲಿ ಮಾಡುತ್ತಿದ್ದಾರೆ. ಸರ್ಕಾರ ಹೆಚ್ಚು ಮಾಡಲು ಯಾವ ಮಾನದಂಡ ಇಟ್ಟುಕೊಂಡು ಬಾಡಿಗೆಯನ್ನು ಹೆಚ್ಚು ಮಾಡಿದ್ದೀರಿ? ಮಹಾರಾಷ್ಟ್ರದಲ್ಲಿ ಒಂದು ವರ್ಷದಿಂದ ಒಂದು ವರ್ಷಕ್ಕೆ ಶೇಕಡ 4 ರಷ್ಟು ಮಾತ್ರ ದರ ಹೆಚ್ಚು ಮಾಡುತ್ತಾರೆ. ಆದರೆ ಇಲ್ಲಿ ಶೇಕಡ 200 ಕ್ಕೂ ಜಾಸ್ತಿ ಆಗಿದೆ. ಕೆಲವು ಕಡೆ 150 ಕ್ಕೂ ಜಾಸ್ತಿ ಆಗಿದೆ. ಮಂಗಳೂರಿಗೆ ಒಂದು ರೇಟು, ಮಲ್ಪೆ ಮತ್ತು ಅಂಗಾರಕಟ್ಟೆ ಗೆ ಒಂದು ರೇಟು. ಅಮೇಲೆ ಬೈಂದೂರು ಈ ಕಡೆ ಒಂದು ರೇಟು. ಈ ಕಡೆ ಉಲ್ಲಾಳ ಗ್ರಾಮಾಂತರ ಪ್ರದೇಶ, ಅದು ನಗರದಲ್ಲಿ ಕೂಡ ಇಲ್ಲ. ಬಡ ಮೀನುಗಾರರಿಗೆ ಎನು ದರ ವಿಧಿಸಿದ್ದೀರಿ ಅದನ್ನು ದಯವಿಟ್ಟು ಪರಿಶೀಲನೆ ಮಾಡಬೇಕು. ತಾವು ಒಂದು 5 ಪರ್ಸೆಂಟ್‌ನಷ್ಟು ಒಂದು ನಿರ್ದಿಷ್ಟವಾದ ದರ ನಿಗದಿ ಮಾಡಿ ಈ ಬಗ್ಗೆ ನನಗೆ ಉತ್ತರ ನೀಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಬ್ರೀಫ್ ಆಗಿ ಇರಬೇಕು. The intelligence of the Members will be known in their presentation. ಇದು ಒಂದು ರೀತಿ ಕ್ವಿಜ್ ಕಾಂಪಿಟೇಷನ್ ಇದ್ದಂತೆ. ರಿಪಿಟೇಶನ್ ಆಗಬಾರದು.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ರಾಜ್ಯ ಮಂತ್ರಿ) :- ಈಗ ಕೆ. ಜಿ. 30 ರೂ. ರಂತೆ ಫಿಕ್ಸ್ ಮಾಡಿದ್ದೇವೆ. 10 ವರ್ಷದ ನಂತರ ನಾವು ಈ ರೇಟನ್ನು ಜಾಸ್ತಿ ಮಾಡಿದ್ದೇವೆ. ಪ್ರತೀ ವರ್ಷ ನಾವು ಶೇ 10 ರಷ್ಟು ಜಾಸ್ತಿ ಮಾಡಿದ್ದರೆ, 1996 ನೇ ಇಸವಿಗೆ ಇದು ಎರಡರಷ್ಟು ಆಗುತ್ತಿತ್ತು. ಆದರೆ ನಾವು 1997 ನೇ ಇಸವಿಗೆ 90 ರೂ. ಜಾಸ್ತಿ ಮಾಡಿದ್ದೇವೆ. ಆದರೆ ಅವರು ಹೇಳಿದರು, ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ರೀತಿಯಲ್ಲಿ ಜಾಸ್ತಿ ಮಾಡಿದ್ದಾರೆ ಎಂದು. ನಾವು ಯಾವ ಪ್ರದೇಶದಲ್ಲಿ ಕಡೆಮೆ ಬೇಡಿಕೆ ಇದೆ ಅಲ್ಲಿ ಕಡಿಮೆ ಮಾಡಿದ್ದೇವೆ. ಆ ರೀತಿಯಲ್ಲಿ ನಾವು ದರವನ್ನು ನಿಗದಿ ಮಾಡಿದ್ದೇವೆ. ಆದುದರಿಂದ 1987 ರಿಂದ 1997 ರವರೆವಿಗೆ ಬೇರೆ ಎಲ್ಲಾ ಮೀನಿನ ದರ ಎಷ್ಟು ಜಾಸ್ತಿಯಾಗಿದೆ ಅದನ್ನು ಸಹ ನಾವು ಪರಿಗಣನೆಗೆ ತೆಗೆದುಕೊಂಡು ಮತ್ತು, ಇವರ ವ್ಯಾಪಾರದಲ್ಲಿ ಎಷ್ಟು ಲಾಭ ಇದೆ ಎಂಬುದನ್ನೆಲ್ಲಾ ಪರಿಗಣನೆಗೆ ತೆಗೆದುಕೊಂಡು 10 ಚದುರ ಮೀಟರ್‌ಗೆ 96 ರೂ. ಜಾಸ್ತಿ ಮಾಡಿದ್ದೇವೆ. ಆದರೆ ಇದಕ್ಕೆ ಯಾರು ಅಬೆಜೆಕ್ಷನ್ ಹಾಕಿರಲಿಲ್ಲ ಕೋರ್ಟ್ ಆಫೀಸಿನಲ್ಲೂ ಸಹ ಇದನ್ನು ನೋಟೀಸ್ ಬೋರ್ಡ್‌ನಲ್ಲಿ ಹಾಕಿದ್ದೆವು. ಆದರ್ಯಾಗಲೂ ಸಹ ಯಾರೂ ಆಬ್‌ಜೆಕ್ಷನ್ ಹಾಕಲಿಲ್ಲ.

ಶ್ರಿ ಕೆ.ಜಯರಾಂ ಶೆಟ್ಟಿ :- ಬಡ ಮೀನುಗಾರರು ಯಾರೂ ವಿದ್ಯಾವಂತರಲ್ಲ. ಅವರ್ಯಾರು ನೋಟಿಫಿಕೇಷನ್ ನೋಡುವುದಕ್ಕೆ ಹೋಗುವುದಿಲ್ಲ. ಆದುದರಿಂದ ಕಾನೂನು ನಿಯಮ ಅವರಿಗೆ ಜಾರಿ ಮಾಡುವುದು ಸರಿ ಅಲ್ಲ. ನೀವು ಶೇ 2 ರಷ್ಟು ಜಾಸ್ತಿ ಮಾಡಿ ಸುಮಾರು 7 ವರ್ಷವಾಯಿತು. ಹತ್ತು ವರ್ಷಕ್ಕೆ ಶೇ 200 ಮಾಡಿರುವುದು ಜಾಸ್ತಿಯಾಯಿತು.

(ಊ) ಮಾರ್ಕಂಡೇಯ ನೀರಾವರಿ ಯೋಜನೆ

ಶ್ರೀ ಚಂದ್ರಶೇಖರ ಸದಾಶಿವ ನಾಯಕ್ (ಗೋಕಾಕ) :- ಸನ್ಮಾನ್ಯ ಸಭಾಧ್ಯಕ್ಷರೆ, ಬೆಳಗಾವಿ ಜಿಲ್ಲೆಯಲ್ಲಿ ಮಾರ್ಕಂಡೇಯ ನೀರಾವರಿ ಯೋಜನೆ ಪ್ರಾರಂಭವಾಗಿದೆ. ಆದರೆ, ಇದರಲ್ಲಿ ಮುಳುಗಡೆ ಆಗತಕ್ಕಂತಹ ರೈತರಿಗೆ ಪರಿಹಾರ ಒದಗಿಸುವುದಕ್ಕೆ, ಮತ್ತು ಪುನರ್ ವಸತಿ ಸಲುವಾಗಿ ಸರ್ಕಾರ ಇನ್ನೂ ಯಾವುದೇ ರೀತಿಯಾದ ಸರ್ವೆ ಕಾರ್ಯ ಯೋಜನೆ ಮಾಡಿಲ್ಲ. ಅದಕ್ಕಾಗಿ ಅಲ್ಲಿ ಪ್ರತಿಭಟನೆ ವ್ಯಕ್ತವಾಗುತ್ತಿದೆ. ಅದರ ಸಲುವಾಗಿ ಸರ್ಕಾರ ತೆಗೆದುಕೊಂಡಂತಹ ನಿರ್ಣಯ ಏನು ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಬಯಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸ್ವಲ್ಪ ಮಾಹಿತಿಯನ್ನು ತರಿಸಬೇಕಾಗುತ್ತದೆ. ನಾವು ಸಂಬಂಧ ಪಟ್ಟ ಅಧಿಕಾರಿಗಳ ಜೊತೆ ಸಂಪರ್ಕ ಬೆಳೆಸಿ, ಏತಕ್ಕೋಸ್ಕರ ಪರಿಹಾರ ಕೊಡಲಿಲ್ಲ ಎನ್ನುವ ಬಗ್ಗೆ ಈಸದನದಲ್ಲಿ ಒಂದುಟಿಪ್ಪಣಿಯನ್ನು ಮಂಡಿಸುತ್ತೇನೆ.

(ಋ) ತುಮಕೂರಿಗೆ ಕ್ರೇನ್ ಒದಗಿಸುವುದು

ಶ್ರೀ ಚೆ. ಸಿ. ಮಾಧುಸ್ವಾಮಿ :- ಸನ್ಮಾನ್ಯ ಅಧ್ಯಕ್ಷರೆ, ತುಮಕೂರು, ಬೆಂಗಳೂರು ಮಧ್ಯೆ ಅಪಘಾತಗಳು ಸಂಭವಿಸುತ್ತಿರುತ್ತವೆ, ಅಲ್ಲದೆ ಅನೇಕ ವೇಳೆ ರಸ್ತೆ ಬ್ಲಾಕ್ ಆಗುತ್ತಿರುತ್ತದೆ. ಈ ಕಡೆಯಿಂದ ವಾಹನಗಳು ಆ ಕಡೆಗೆ, ಆ ಕಡೆಯಿಂದ ವಾಹನಗಳು ಈ ಕಡೆಗೆ ಓಡಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದಕಾರಣ ನಾವು ಇದರ ಬಗ್ಗೆ ಅನೇಕ ಸಲ ಬೇಡಿಕೆಯನ್ನು ಸಹ ಕೊಟ್ಟಿದ್ದೇವೆ. ಅದೇನೆಂದರೆ, ತುಮಕೂರು ಎಸ್.ಪಿ. ಅವರ ವಶಕ್ಕೆ ಒಂದು ಕ್ರೇನ್ ಕೊಡಿ, ಏಕೆಂದರೆ ಅಪಘಾತವಾದ ವಾಹನಗಳನ್ನು ಬೇರೆ ಕಡೆ ಸರಿಸುವುದಕ್ಕೆ ಅನುಕೂಲವಾಗುತ್ತದೆ ಮತ್ತು ಇದರಿಂದ ರಸ್ತೆ ಸಂಚಾರ ಸುಗಮವಾಗುತ್ತದೆ ಎಂದು. ಆದರೆ ಸರ್ಕಾರದವರಿದೂವರೆವಿಗೂ ಯಾವುದೇ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಂತೆ ಕಾಣಲಿಲ್ಲ. ಆದಕಾರಣ ಈಗಲಾದರೂ ಸರ್ಕಾರದವರು ಕ್ರೇನ್ ಕೊಡುವುದಕ್ಕೆ ಒಪ್ಪಿಗೆ ನೀಡುತ್ತಾರೆಯೇ ಎಂಬ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಇದಕ್ಕೆ ನೇರವಾಗಿ ಸರ್ಕಾರದ ಉತ್ತರವನ್ನು ಹೇಳಬಯಸುತ್ತೇನೆ. ಬೆಂಗಳೂರು ಮಧ್ಯೆ ತುಮಕೂರುಭಾಗದಲ್ಲಿ ಬಹಳಷ್ಟು ಅಪಘಾತಗಳು ಸಂಭವಿಸುತ್ತಿರುತ್ತವೆ ಈ ಅಪಘಾತಗಳನ್ನು ತಡೆ ಹಿಡಿಯಬೇಕು ಎಂಬುದೇ ನಮ್ಮ ಮೊದಲ ಕ್ರಮವಾಗಿದೆ. ಬೆಂಗಳೂರಿನಿಂದ ತುಮಕೂರಿನವರೆವಿಗೂ ರೋಡ್ ಕಂಪ್ಲೀಟ್ ಆಗಿ ಒನ್ ವೇ ರೋಡ್ ಆದರೆ ಬಹುಶ: ಅಪಘಾತಗಳು ಕಡಿಮೆ ಆಗುವಂತಹದ್ದಕ್ಕೆ ಬಹಳಷ್ಟು ಸಹಕಾರಿಯಾಗುತ್ತದೆ. ಕ್ರೇನ್ ಕೊಡುವ ವಿಷಯದಲ್ಲಿ ಹೇಳಬೇಕು ಎಂದರೆ, ಕೆ ಎಸ್ ಆರ್ ಟಿಸಿ ಯಲ್ಲಿ ಇರುವಂತಹ ಯಾವುದಾದರೂ ಒಂದು ಕ್ರೇನನ್ನು ತುಮಕೂರು ಎಸ್.ಪಿ. ಅವರಿಗೆ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ.